# 'ಸ್ವ-ರೂಪ' ಸಂಭ್ರಮ!



★ ಸುರೇಶ ಬಿ.ವಿ.

ಕೇವಲ 23 ದಿನಗಳಲ್ಲಿ ಎಸ್ಸೆಸ್ಸೆಲ್ಸಿ ಪಠ್ಯಕ್ರಮದ ಪಾಠ. ಎಸ್ಸೆಸ್ಸೆಲ್ಸಿ ಪರೀಕ್ಷೆ ಬರುವುದರ ಒಳಗೆ ನೂರಕ್ಕೂ ಹೆಚ್ಚು ಬಾರಿ ಪುನರ್‌ಮನನ (ರಿವಿಷನ್). ಪಾಠದ ನಂತರದ ದಿನಗಳಲ್ಲಿ ಹಾಡು, ಮಾತುಗಾರ, ನೃತ್ಯ, ಚಿತ್ರಕಲೆಯಂಥ ಹತ್ತಾರು ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶ...

ಪಬ್ಲಿಕ್ ಪರೀಕ್ಷೆಗೆ ಮಗುವನ್ನು ತಯಾರು ಮಾಡುತ್ತಿರುವ ಹೆತ್ತವರು ಅಥವಾ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿ ನೀವಾಗಿದ್ದರೆ, 'ಅಬ್ಬಬ್ಬಾ ಇದೆಲ್ಲ ಕನಸು' ಎಂದು ಮೂಗು ಮುರಿಯುತ್ತೀರಿ. ಆದರೆ ಇವೆಲ್ಲವೂ ಸಾಧ್ಯ ಎಂದು ಧೈರ್ಯದಿಂದ ನುಡಿಯುವ ಮತ್ತು ಅದನ್ನೇ ಸಾಧಿಸಿ ತೋರಿಸಿದ ಸಂಸ್ಥೆಯೊಂದು ಮಂಗಳೂರಿನಲ್ಲಿದೆ. ಅದೇ ಸ್ವ-ರೂಪ ಅಧ್ಯಯನ ಕೇಂದ್ರ.

'ಕಲಿವ ಹಕ್ಕು ನನ್ನ ಕೈಗೆ ಕೊಡಿ' ಆಂದೋಲನದಡಿ ಈ ಕೇಂದ್ರವು ಕಳೆದ 50ಕ್ಕೂ ಹೆಚ್ಚು ದಿನಗಳಲ್ಲಿ ಕರ್ನಾಟಕದ 54 ಕೇಂದ್ರಗಳಿಗೆ ಭೇಟಿ ಕೊಟ್ಟಿದೆ. 100 ವಿಶೇಷ ಪ್ರದರ್ಶನ ಕೊಡುವ ಮೂಲಕ 'ಬೊನ್ಸಾಯ್ (ಕುಬ್ಜ ಮರ ಬೆಳೆಸುವ ವಿಧಾನ) ಶಿಕ್ಷಣ ನಿಲ್ಲಿಸಿ' ಎಂಬ ಸಂದೇಶವನ್ನು ಜನರ ಮುಂದಿಟ್ಟಿದೆ.

ಹತ್ತನೇ ತರಗತಿ ವಿದ್ಯಾರ್ಥಿಗಳೊಂದಿಗೆ ಈ ಬಾರಿ 54 ದಿನಗಳ ಕಾಲ ಶೈಕ್ಷಣಿಕ ಜಾಥಾ ನಡೆಸಲಾಗಿದೆ. ಆದರೂ ಎಸ್‌ಎಸ್‌ಎಲ್‌ಸಿಯಲ್ಲಿ ಶೇಕಡಾ 100ರಷ್ಟು ಫಲಿತಾಂಶದ ಭರವಸೆಯನ್ನು ನಾವು ಹೆತ್ತವರಿಗೆ ನೀಡುತ್ತಿದ್ದೇವೆ. ಇದನ್ನು ಕಳೆದ ವರ್ಷ ಸಾಧಿಸಿ ತೋರಿಸಿದ್ದೇವೆ. ಅಧ್ಯಯನ ಕೇಂದ್ರವು 18 ವರ್ಷಗಳ ಕಾಲ ನಡೆಸಿದ ನಿರಂತರ ಅಧ್ಯಯನದ ಫಲವಿದು. ಎಲ್ಲ ಮಗುವೂ ಜೀನಿಯಸ್. ಎಲ್ಲ ಮಕ್ಕಳಿಗೂ ಜಗತ್ತಿಗೆ ಶ್ರೇಷ್ಠ ಎನ್ನುವ ಫಲಿತಾಂಶ ಆಧಾರಿತ -ಪರ್ಯಾಯ ಸಂಯೋಜಿತ ಶಿಕ್ಷಣ ಸ್ವರೂಪದಲ್ಲಿದೆ. ತನ್ನನ್ನೇ ತಾನು ಅಧ್ಯಯನ ಮಾಡುತ್ತಾ ಬೆಳೆಯುವ ಸ್ವರೂಪ (ಸ್ವ-ರೂಪ) ಶಿಕ್ಷಣ ಕೊಡುತ್ತಿರುವೆವು ಎನ್ನುತ್ತಾರೆ ಗೋಪಾಡ್ಕರ್.

ಆರು ಪಾಠ ಪುಸ್ತಕಗಳು, ಅದರ ಮೇಲೆ ಪರೀಕ್ಷೆ, ಅಂಕಗಳು- ಈ ಸೀಮಿತ ಚೌಕಟ್ಟಿನಲ್ಲಿ ಎಸ್‌ಎಸ್‌ಎಲ್‌ಸಿ ಶಿಕ್ಷಣ ನಿಂತಿದೆ. ಇದನ್ನು ತಪ್ಪಿಸಿ ಸಾಧಕರನ್ನು ನಿರ್ಮಿಸುವ ಸವಾಲನ್ನು ಸ್ವರೂಪ ಸ್ವೀಕರಿಸಿದೆ. ಬದಲಾವಣೆ, ಬೆಳವಣಿಗೆ, ಹುಡುಕಾರ ಮತ್ತು 'ಈ ನೆಲದ ಪ್ರೀತಿಗಾಗಿ' ಸ್ವರೂಪ ಶಿಕ್ಷಣ ಪ್ರಯತ್ನ ಸಾಗಿದೆ ಎಂದು ಸುಮಾಡ್ಕರ್ ತಿಳಿಸುತ್ತಾರೆ.

ಈಗಿನ ಶಿಕ್ಷಣದಡಿ ಕಲಿತದ್ದನ್ನು ಪರೀಕ್ಷೆ ಬಳಿಕ ಮರೆಯುತ್ತೇವೆ. ವಿದ್ಯಾರ್ಥಿಯ ಅಪಾರ ಸಾಮರ್ಥ್ಯದ ಬೆಳವಣಿಗೆ, ಕ್ರಿಯಾಶೀಲತೆಗೆ ಎಸ್‌ಎಸ್‌ಎಲ್‌ಸಿಯಂಥ ಪರೀಕ್ಷೆ ಬಂದೊಡನೆ ಬ್ರೇಕ್ ಬೀಳುತ್ತದೆ. ಸ್ವರೂಪ ಅಧ್ಯಯನ ಕೇಂದ್ರವು ವಿದ್ಯಾರ್ಥಿಯಲ್ಲಿನ ಅದ್ಭುತ ಸಾಮರ್ಥ್ಯವನ್ನು ಆತನಿಗೆ ಪರಿಚಯಿಸುವುದು ಮತ್ತು ಅವುಗಳ ಬೆಳವಣಿಗೆಗೆ ನೆರವಾಗುವ ಕೆಲಸವನ್ನು ಮಾಡುತ್ತಿದೆ. ಪ್ರತಿ ಪರೀಕ್ಷೆ ವೇಳೆ ಬೊನ್ಸಾಯ್ ಆಗುವ ಮಗುವನ್ನು ಸ್ಮರಣಶಕ್ತಿ ಎಂಬ ತಾಯಿಬೇರಿನೊಡನೆ ಬೆಳೆಯಲು ಅವಕಾಶ ಮಾಡಿಕೊಡುತ್ತೇವೆ ಎಂಬುದು ಈ ಕೇಂದ್ರದ ನಿರ್ದೇಶಕ ಗೋಪಾಡ್ಕರ್ ಸ್ಪಷ್ಟನುಡಿ.

ವಿದ್ಯಾರ್ಥಿಯನ್ನು ನೆನಪಿನ ಸಾಧಕನಾಗಿ ಬೆಳೆಸುತ್ತೇವೆ. 10 ನೆನಪಿನ ತಂತ್ರಗಳ ಅಭ್ಯಾಸ ಅಲ್ಲಿರುತ್ತದೆ. ಚಿತ್ರಕಲಾವಿದ, ಹಾಡುಗಾರ, ಮಾತುಗಾರ, ಬರಹಗಾರ, ಭಾವನಾತ್ಮಕ ಪರಿಜ್ಞಾನ, ಮನೋವಿಕಾಸ ಕೌಶಲ್ಯ, ಅಭಿನಯ, ಅಭಿವರಕ್ತ, ನೃತ್ಯ, ಫಲಿತಾಂಶ- ಜೀವನ ಶಿಕ್ಷಣದ ವಿಭಿನ್ನ ಪರಿಕಲ್ಪನೆಯನ್ನು ವಿದ್ಯಾರ್ಥಿ ಅರಿಯುವಂತೆ ಮಾಡುತ್ತೇವೆ. ಕೈಭಾಶಿ, ಮೆಕೆ ಭಾಶಿ (ಸಂಕೇತ ಭಾಷೆ)ಯ ಶಿಕ್ಷಣವನ್ನು ಕಲಿಸಿ ಅದನ್ನು ಸಂತಸ ಕಲಿಕೆಯಾಗಿ ಪರಿವರ್ತಿಸುತ್ತೇವೆ ಎಂದು ಸ್ವರೂಪದ ಪ್ರಾಂಶುಪಾಲೆ ಸುಮಾಡ್ಕರ್ ವಿವರಿಸುತ್ತಾರೆ.

'ಒಂದು ಸಾವಿರ ವಸ್ತುಗಳನ್ನು ನೆನಪಿನಲ್ಲಿಡುವ ವಿದ್ಯಾರ್ಥಿಯನ್ನು ಸಿದ್ಧಪಡಿಸಿರುವ ಈ ಕೇಂದ್ರ ನೆನಪು ಶಕ್ತಿಯಲ್ಲಿ ಲಿಮ್ಕಾ ದಾಖಲೆ ಮಾಡಿದೆ' ಎನ್ನುತ್ತಾರೆ ಈ ಕೇಂದ್ರದ ಅಧ್ಯಾಪಕರು.

ಎಸ್ಸೆಸ್ಸೆಲ್ಸಿ ಮ್ಯಾತ್ಸ್ ಥಿಯೋರಂ, ಸೈನ್ಸ್‌ನಲ್ಲಿ ಫ್ಲೆಮಿಂಗ್‌ನ ಬಲಗೈ ಮತ್ತು ಎಡಗೈ ನಿಯಮ, 50 ವಸ್ತುಗಳನ್ನು ನೆನಪಿನಲ್ಲಿ ಇಟ್ಟುಕೊಂಡು ಹೇಳುವ ಪ್ರದರ್ಶನ, ಪಾಠದ ಪ್ರಶ್ನೆಗಳಿಗೆ ಹಾಡಿನ ಮೂಲಕ ಪ್ರದರ್ಶನ, ಕೈಯ ಸಂಕೇತ ಮೂಲಕ ಮೊಬೈಲ್ ನಂಬರ್, ಹುಟ್ಟಿದ ದಿನಾಂಕ, ಇತಿಹಾಸದ ವರ್ಷಗಳು ಮತ್ತು ಪಾಠ ಪ್ರಶ್ನೋತ್ತರಗಳನ್ನು ವಿವರಿಸುವ ಜಾಥಾವನ್ನು ಸ್ವರೂಪ ಸಂಘಟಿಸಿದೆ ಎಂದು ಗುಲ್ಬರ್ಗದಲ್ಲಿ ಜಾಥಾ ವೀಕ್ಷಿಸಿದ ಪ್ರಭು ಪಾಟೀಲ ತಿಳಿಸಿದರು.

8ರಿಂದ 10ನೇ ತರಗತಿಯ ಮಕ್ಕಳಿಗೆ ಕಲಿಸುವ ಕೇಂದ್ರವೂ ಇಲ್ಲಿದೆ. ಅಲ್ಲದೆ ಎರಡು ವರ್ಷಗಳ ಬಳಿಕ ಎಳೆಯ ಮಗುವಿಗೂ ಶಿಕ್ಷಣ ಕೊಡುವ ಕೇಂದ್ರ ಆರಂಭಿಸುವುದಾಗಿ ಗೋಪಾಡ್ಕರ್ ಹೇಳುತ್ತಾರೆ. ಒಂದು ವರ್ಷದ ಮಗು 20 ಸಾವಿರ ಚಿತ್ರಗಳನ್ನು ಗುರುತಿಸುವ ಅದ್ಭುತ ಶಕ್ತಿ ಹೊಂದಿದೆ. 2 ವರ್ಷದ ಮಗುವಿಗೆ 50 ಸಾವಿರ ಚಿತ್ರಗಳನ್ನು ಗುರುತಿಸುವ ಸಾಮರ್ಥ್ಯ ಇದೆ ಎಂಬುದನ್ನು 'ಸ್ವರೂಪ' ಕೇಂದ್ರವು ತೋರಿಸಿಕೊಟ್ಟಿದೆ ಎಂದೂ ಅವರು ವಿವರಿಸುತ್ತಾರೆ. ಗೋಪಾಡ್ಕರ್ ಅವರನ್ನು ಸ್ವರೂಪ ಅಧ್ಯಯನ ಕೇಂದ್ರ, ವೃದ್ಧಾಶ್ರಮ ರಸ್ತೆ, ಸಮೃದ್ಧಿ ಬಿಲ್ಡಿಂಗ್, ಕೊಡಿಯಾಲಬೈಲ್, ಮಂಗಳೂರು- 575002 (ಮೊಬೈಲ್: 9141514172, 98452 03472) ಇಲ್ಲಿ ಸಂಪರ್ಕಿಸಬಹುದು. ವೆಬ್ ವಿಳಾಸ: www.swa-roopa.com

